ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

## ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ3(7) ಪ್ರಾಶಾಶಿ-ವರ್ಗ-07/2017-18

ದಿನಾಂಕ: 24-02-2018

: ಜ್ಞಾಪನ :

ವಿಷಯ:- 2017-18ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವೃಂದದ ಶಿಕ್ಷಕರುಗಳಿಗೆ ಕೋರಿಕೆ/ಪರಸ್ಪರ ವರ್ಗಾವಣೆ ಅರ್ಜಿಗಳ ಬಗ್ಗೆ.

ಉಲ್ಲೇಖ:-1) ಕರ್ನಾಟಕ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29/11/2017.

2) ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ: ಸಿ3(7) ಪ್ರಾಶಾಶಿ-ವರ್ಗ-07/2017-18 ದಿನಾಂಕ: 29/12/2017. ಮತ್ತು 09/02/2018

3) ಪ್ರೌಢ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ: ಸಿ4(7) ಪ್ರೌಶಿ-ವರ್ಗ-29/2017-18 ದಿನಾಂಕ: 01/01/2018. ಮತ್ತು 09/02/2018

-----*****-----

2017-18 ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಮಾರ್ಗಸೂಚಿ ಸಹಿತ ವೇಳಾಪಟ್ಟಿಯಲ್ಲಿ ವರ್ಗಾವಣಾ ಪ್ರಾಧಿಕಾರಿಗಳು ಕಾಲದಿಂದ ಕಾಲಕ್ಕೆ ಹಮ್ಮಿಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ. ವರ್ಗಾವಣೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಆನ್‌ಲೈನ್‌ನಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಪೈಕಿ ಕೆಳಗಿನ ಆದ್ಯತೆಗಳನ್ನು ಕೋರಿರುವ ಪ್ರಕರಣಗಳಲ್ಲಿ ಮಾತ್ರ ಕ್ಷೇತ್ರಶಿಕ್ಷಣಾಧಿಕಾರಿ/ಉಪನಿರ್ದೇಶಕರ ಹಂತದಲ್ಲಿ ಪರಿಶೀಲಿಸಿ ಅರ್ಜಿಗಳನ್ನು ಅನುಮೋದಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತಾಗಿ ವರ್ಗಾವಣಾ ತಂತ್ರಾಂಶದಲ್ಲಿ ಅಗತ್ಯ ಅವಕಾಶಗಳನ್ನು ಕಲ್ಪಿಸಿದೆ.

ಅ) <u>ಉಪನಿರ್ದೇಶಕರ ಹಂತದಲ್ಲಿ ಪರಿಶೀಲಿಸಬೇಕಾದ ಆದ್ಯತಾ ಪ್ರಕರಣಗಳು</u> :

1. ಗಂಭೀರ ಕಾಯಿಲೆಯ ಶಿಕ್ಷಕರ ಪ್ರಕರಣಗಳು.
2. ತೆರೆದ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಪಟ್ಟ / ಅಂಗಾಂಗ ಕಸಿ ಮರು ಜೋಡಣೆಯಾದ ಪ್ರಕರಣಗಳು.

ಆ) <u>ಕ್ಷೇತ್ರಶಿಕ್ಷಣಾಧಿಕಾರಿಯವರ ಹಂತದಲ್ಲಿ ಪರಿಶೀಲಿಸಬೇಕಾದ ಆದ್ಯತಾ ಪ್ರಕರಣಗಳು (ಉಪನಿರ್ದೇಶಕರು ಈ ಎಲ್ಲ ಪ್ರಕರಣಗಳಲ್ಲಿಯೂ ತಾಂತ್ರಿಕ ಅನುಮೋದನೆಗೆ ಅವರ ಲಾಗಿನ್‌ನಲ್ಲಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು)</u> :

3. ವರ್ಗಾವಣಾ ನಿಯಮದಲ್ಲಿನ ವ್ಯಾಖ್ಯಾನದಂತೆ ಸದರಿ ಆದ್ಯತೆಯಲ್ಲಿ ಅರ್ಜಿ ಸಲ್ಲಿಸಿರುವ ಪ್ರಕರಣಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಕರಣಗಳ ಹೊರತು ಇತರೆ ಪ್ರಕರಣಗಳು
4. ದೈಹಿಕ ಅಂಗವಿಕಲ ಶಿಕ್ಷಕರ ಪ್ರಕರಣಗಳು.
5. ವಿಧವೆ ಅಥವಾ ವಿಚ್ಛೇದಿತ ಮಹಿಳಾ ಶಿಕ್ಷಕಿಯರ ಪ್ರಕರಣಗಳು.
6. ಸೈನಿಕರ ಪ್ರಕರಣಗಳು.( ನಿವೃತ್ತಿ/ಹುತಾತ್ಮ/ಶಾಶ್ವತ ಅಂಗವಿಕಲ/ಮರಣ )
7. ಸೈನಿಕರ ಪ್ರಕರಣಗಳು.( ಪ್ರಸ್ತುತ ಸೇವೆಯಲ್ಲಿರುವವರು )
8. ಗರ್ಭಿಣಿ/1 ವರ್ಷದೊಳಗಿನ ಮಗುವನ್ನು ಹೊಂದಿರುವ ಶಿಕ್ಷಕಿಯರ ಪ್ರಕರಣಗಳು.
9. ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಸ್ಥೆಗಳ ಚುನಾಯಿತ ಪದಾಧಿಕಾರಿಗಳು.

ಉಳಿದಂತೆ ಇರುವ ಅರ್ಜಿಗಳ ಪೈಕಿ, ಪತಿ-ಪತ್ನಿ (ಸರ್ಕಾರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು) ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಕರಣಗಳಲ್ಲಿ , ಕೇಂದ್ರೀಕೃತ ಮಾದರಿಯಲ್ಲಿ

ಹೆಚ್.ಆರ್.ಎಂ.ಎಸ್ ತಂತ್ರಾಂಶದಿಂದ ಮಾಹಿತಿ ಪಡೆದು ತಾಂತ್ರಿಕ ಅನುಮೋದನೆಗೆ ಕ್ರಮ ಕೈಗೊಳ್ಳಲು ಮತ್ತು ಮತ್ತಿತರೆ ಎಲ್ಲ ಅರ್ಜಿಗಳ ಬಗ್ಗೆ ಶಿಕ್ಷಕರ ಡಾಟಾ ಬೇಸ್ ತಂತ್ರಾಂಶದ ಮಾಹಿತಿಯ ಆಧಾರದ ಮೇಲೆ ತಾಂತ್ರಿಕ ಅನುಮೋದನೆ ಕ್ರಮಕೈಗೊಳ್ಳಲು ಈ ಕಛೇರಿಯ ಇ–ಆಡಳಿತ ಶಾಖೆಗೆ ತಿಳಿಸಿದೆ.

ಉಳಿದಂತೆ ಎಲ್ಲ ಸೂಚನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ನಿರ್ದೇಶಕರು
ಪ್ರೌಢ ಶಿಕ್ಷಣ

ನಿರ್ದೇಶಕರು
ಪ್ರಾಥಮಿಕ ಶಿಕ್ಷಣ

ಇವರಿಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ವಿಭಾಗೀಯ ಸಹ ನಿರ್ದೇಶಕರು ಬೆಂಗಳೂರು/ಮೈಸೂರು ವಿಭಾಗ.
2. ಅಪರ ಆಯುಕ್ತರು, ಕಲಬುರ್ಗಿ/ಧಾರವಾಡದ ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ ಗುಲ್ಬರ್ಗ.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ
4. ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)
5. ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು ಇ–ಆಡಳಿತ ಶಾಖೆ. ಆಯುಕ್ತರ ಕಛೇರಿ. ಬೆಂಗಳೂರು, ಈ ಕುರಿತಂತೆ ಅಗತ್ಯ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ತಿಳಿಸಿ.
6. ಶ್ರೀ ಶಿವಕುಮಾರ್. ಹಿರಿಯ ಪ್ರೋಗ್ರಾಮರ್. ಇ–ಆಡಳಿತ ಶಾಖೆ ಹಾಗು ತಂಡ. ಆಯುಕ್ತರ ಕಛೇರಿ. ಬೆಂಗಳೂರು
7. ಕಛೇರಿ ಪ್ರತಿ.

ಪ್ರತಿ : 1) ಅಪರ ನಿರ್ದೇಶಕರು, ಆಯುಕ್ತರ ಕಛೇರಿ, ಬೆಂಗಳೂರು
2) ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ, ಈ ಕುರಿತಂತೆ ಮಾನ್ಯ ಆಯುಕ್ತರ ಗಮನಕ್ಕೆ ತರಲು ತಿಳಿಸಿ